ಅಂದರಲ್ಲದೆ ಏನೋ ನೆನಪಿಸಿಕೊಂಡವರಂತೆ, ‘ಆ್ಞ, ಇನ್ನೊಂದು ವಿಷ್ಯ. ಕೆರೇಲಿ ಹೆಣಗಳು ತೇಲ್ತ ಇರೋದು ಯಾರಿಗೂ ಗೊತ್ತಾಗಬಾರದು...’ ಎನ್ನುತ್ತ ಪಿಡಿಒ ಮುಖ ನೋಡಿದರು. ಅವನು ಎದ್ದು ಹೋದ.

ಪಿಡಿಒ ಗೇಟು ದಾಟಿ ಹೋಗೊವರೆಗೆ ಸುಮ್ಮನಿದ್ದ ಚೇರ್ಮನ್ನರು, ‘ಎಲ್ಲಾ ಚೆನ್ನಾಗಿದೆ ಅನ್ನೋವಾಗ ಇದೊಂದು ಹೊಸ ತರಲೆ ಶುರುವಾಯ್ತಲ್ಲ ರಾಜಣ್ಣ. ಇನ್ನಾರು ತಿಂಗಳಿಗೆ ಎಲೆಕ್ಷನ್ನು. ಊರಲ್ಲಿ ಮೂರ್ನಾಲ್ಕು ಪಾರ್ಟಿಗಳಿವೆ. ತಲೆ ಕೆಟ್ಟೋರು ಊರ ತುಂಬಾ ಜನ ಅವ್ರೆ. ಈ ಸಣ್ಣ ವಿಷಯಾನ ದೊಡ್ಡದು ಮಾಡ್ತಾರೆ. ಕೆರೆ ನೀರು ಕುಡಿದರೆ ಕೊರೊನಾ ಬರುತ್ತೆ ಅಂತ ಅಪಪ್ರಚಾರ ಮಾಡಬೌದು. ಕೆರೆಯನ್ನು ಖಾಲಿ ಮಾಡ್ಸಿ ಅನ್ನಬೌದು. ಇರೋ ನೀರನ್ನು ಹೊರಕ್ಕೆ ಬಿಟ್ಟರೆ ಮುಂದಿನ ಮಳೆಗಾಲದತನಕ ಊರಿಗೆ ಹೊರಗಿಂದ ನೀರು ತಂದು ಕೊಡಕೆ ಆಗುತ್ತಾ?...

ಕಂಪ್ಲೇಂಟ್ ಕೊಡೋಕೆ ಮೊದಲೇ ನಾವೇ ಹೆಣಗಳನ್ನು ಕೆರೆಯಿಂದ ಹೊರಕ್ಕೆ ಎಳೆಸಿ ಆಕ್ಸಿದ್ರೆ ಹೆಂಗೆ? ಆ ಮೇಲೆ ಕಂಪ್ಲೇಂಟ್ ಕೊಟ್ಟರಾಯ್ತು. ನಾನು ಎಮ್ಮೆಲ್ಲೆ, ಜಿಲ್ಲಾ ಮಂತ್ರಿಗಳ ಜತೆ ಮಾತಾಡ್ತೀನಿ. ಅವರಿಬ್ಬರೂ ಹೇಳಿದರೆ ಪೊಲೀಸರು ಮುಚ್ಚಿಕೊಂಡಿರ್ತಾರೆ. ಆದರೆ, ಈ ಊರ ಬಾಯಿ ಮುಚ್ಚಿಸೋದು ಹೆಂಗೆ?

ಹೆಣಗಳು ನೀರಿಗೆ ಬಿದ್ದೇ ಇಲ್ಲ ಅನ್ನಣ. ಇಡೀ ಕೆರೆ ನೀರಿಗೆ ಪಿಡಿಒ ಅದೇನೊ ಹೇಳಿದ್ನಲ್ಲ ಅದನ್ನು ಮಾಡಿಸಿದರಾಯಿತು. ಒಂದು ತಿಂಗಳು ಹೆಂಗೋ ಮ್ಯಾನೇಜು ಮಾಡಬಹುದು. ಸ್ವಲ್ಪ ದಿನ ನೀರನ್ನು ಕುಚ್ಚಿಕೊಂಡು ಕುಡೀರಿ ಅಂತ ಜನಕ್ಕೆ ಹೇಳನ’ ಎನ್ನುತ್ತ ರಾಜಣ್ಣನ ಮುಖ ನೋಡಿದರು.



‘ಇವತ್ತು ಭಾನುವಾರ. ಗುಡ್ಡದಳ್ಳಿ ಕಡೆಯಿಂದ ಬರೋರು ಕಡಿಮೆ. ಬಂದರೂ ಕೆರೆ ಹತ್ರಕ್ಕೆ ಯಾರೂ ಹೋಗಲ್ಲ. ಜನಕ್ಕೆ ಗೊತ್ತಾಗದಂಗೆ ಹೆಣಗಳನ್ನು ಹೊರಕ್ಕೆ ಎಳಸಾಕಿ ಆ ಮೇಲೆ ಪೊಲೀಸರಿಗೆ ಕಂಪ್ಲೇಂಟ್ ಕೊಡದೇ ಸರಿ. ಯಾರೋ ಕೆರೆ ಹತ್ರ ಹೆಣ ತಂದು ಹಾಕಿದಾರೆ ಅಂತ ನಾನು ಹೇಳ್ತೀನಿ. ಊರಲ್ಲಿ ಪಾರ್ಟಿ ರಾಜಕೀಯ ಇದೆ. ನಮಗೆ ಆಗದವರು ಯಾರೋ ಬೇಕು ಅಂತಲೇ ಹಿಂಗೆ ಮಾಡಿದ್ದಾರೆ ಅಂದ್ರೆ ಪೊಲೀಸರು ತಾನೆ ಏನು ಮಾಡ್ತಾರೆ? ಹಂಗೇ ರಿಪೋರ್ಟ್ ಬರಕೊಂಡು ಹೋಗ್ತರೆ...’ ಅಂತ ಚೇರ್ಮನ್ನರು ಹೇಳಿದರು.

‘ಆದ್ರೆ ಈ ಪಿಡಿಒನ ಒಪ್ಪಿಸೋದೇ ಕಷ್ಟ. ಪ್ರತಿಯೊಂದಕ್ಕೂ ಕೊಕ್ಕೆ ಹಾಕಿ ರೂಲ್ಸು, ಲೊಟ್ಟೆ ಲೊಸಕು ಅಂತ ಕ್ಯಾತೆ ತೆಗೀತಾನೆ... ಇವನ ಬಾಯಿ ಮುಚ್ಚಿಸೋದು ಕಷ್ಟ ಕಷ್ಟ’ ಎನ್ನುತ್ತ ರಾಜಣ್ಣನ ಕಡೆಗೆ ನೋಡಿದರು.

‘ಏ ತಿಮ್ಮರಾಯಿ, ಎಲ್ಲಿದ್ದೀಯೊ?’ ಚೇರ್ಮನ್ನರು ದೊಡ್ಡದಾಗಿ ಕೂಗಿದರು. ಅವನು ಹಿತ್ತಲಲ್ಲಿ ಅಡಿಗೆಮನೆ ಪಕ್ಕದಲ್ಲಿ ಹಾಕಿದ್ದ ಚಪ್ಪರದ ಕೆಳಗೆ ಕುಂತು ಬಿಸಿ ಮುದ್ದೆ ಉಣ್ಣುವುದರಲ್ಲಿ ಮಗ್ನನಾಗಿದ್ದ. ಚೇರ್ಮನ್ನರು ಮತ್ತೆ ಕೂಗಿದರು... ಕೂತಲ್ಲಿಂದಲೇ, ‘ಬಂದೆ ಅಣ್ಣಯ್ಯ’ ಎನ್ನುತ್ತ ಎಂಜಲು ಕೈಯಲ್ಲೇ ಪಡಸಾಲೆಗೆ ಬಂದ.